ವುದರಿಂದ ನಾನು ಮಾತ್ರ ಹೇಳುತ್ತೇನೆ. ನಮ್ಮ ರಾಜಕೀಯ ಎಲ್ಲ ಬೇಕಾದರೂ ಮಾಡಿಕೊಳ್ಳಬಹುದು ಎಂದು ಅರ್ಥವಾಗುತ್ತದೆ. ಈ ಸದನ ಪ್ರಾರಂಭವಾದ ಮೇಲೆ ಎಷ್ಟು ದಿವಸ ಅವರು ಈ ಸಭೆಯಲ್ಲಿ ಕೂತಿದ್ದಾರೆ ? ತಮ್ಮ ಪಕ್ಷದ ಸಭೆಗಳಿಗೆ ಬೇರೆ ಬೇರೆ ಕಡೆಗೆ ಹೋಗುತ್ತಾರೆ ?

ಅಧ್ಯಕ್ಷರು.—ತಾವು ಇದನ್ನು ಮುಂದೆ ಬರುವ ದಿವ್ಯಾಂಡಿನಲ್ಲಿ ಹೇಳಿ ಈಗಾಗಲೇ ಇದನ್ನೆಲ್ಲಾ ಹೇಳಿದರೆ ಮುಖ್ಯಾಹ್ನ ಕಳೆಯಿತು ಕೊಳ್ಳಬೇಕಾದ ಕಾರ್ಯಕ್ರಮ ಬೇಕಾಗಿರಲಿಲ್ಲ. ಈಗ ಇಲ್ಲಿ ಮೊದಲೇ ಗೊತ್ತಾದ ಬಿಜಿನೆಸ್ ಮಾಡಬೇಕಾಗಿದೆ. ತಾವು ಈ ರೀತಿ ಟೀಫ್ ಮಿನಿಸ್ಟರ್ ಮತ್ತು ಅವರಿವರ ಬಗ್ಗೆ ಹೇಳುತ್ತಾ ಇದ್ದರೆ ಹೇಗೆ ?

ಶ್ರೀ ಎಸ್. ಬಂಗಾರಪ್ಪ.—ಬಿಜಿನೆಸ್ ಆಗಬೇಕು ನಿಜ. ಅಡಕ್ಕೋನ್ಸರವೇ ನಾನು ಅದರ ಬಗ್ಗೆ ಎರಡನೇ ಮಾತು ಆಡುತ್ತಾ ಇಲ್ಲ. ಈ ಸದನದಲ್ಲಿ ಹಲವಾರು ಪ್ರಾಮುಖ್ಯವಾದ ವಿಷಯಗಳು ಪುಸ್ತಾಪವಾದರೂ ಕೂಡ ಮುಖ್ಯಮಂತ್ರಿಗಳು ಹೇಳಿಕೆ ಕೊಡುವ ಸಂದರ್ಭ ಬರುತ್ತದೆ ಆ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಇರುವುದಿಲ್ಲ ಎಷ್ಟೋ ಸಾರಿ ಅವರನ್ನು ನಾವು ಕಳೆಬಹುದು. ಮುಖ್ಯಮಂತ್ರಿಗಳು ಮೊನ್ನೆ ಕೂಡ ಬಂದಿಲ್ಲ, ಇವೊತ್ತು ಬಂದಿಲ್ಲ. ಅವರು ಈ ಸಭೆಯಲ್ಲಿ ಇರಬೇಕಾದ್ದು ನಮಗೆ ಬೇಕಾಗಿದೆ. ಅವರಿಗೆ ಜವಾಬ್ದಾರಿ ಇದ್ದಹಾಗೆ ಅರ್ಥವಾಗುತ್ತಿಲ್ಲ. ಈ ಸಭೆಯ ಘನತೆ, ಗೌರವ, ಡೆಕೋರಮ್ ಕಡಿಮೆ ಮಾಡುವುದಕ್ಕೆ ಮುಖ್ಯಮಂತ್ರಿಗಳು ಇದ್ದಾರೆ ಹಾಗೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಮುಖ್ಯಮಂತ್ರಿಗಳು ಸಭೆಗೆ ಬರಲೇಬೇಕು.

Discussion on Demands in the Legislative Council

ಶ್ರೀ ಕಾಗೋಡು ತಿಮ್ಮಪ್ಪ.—ಶ್ರೀಮಾನ್ ಚೆನ್ನಬಸಪ್ಪನವರು ಮೊನ್ನೆ ದಿವಸ ಒಂದು ಭರವಸೆಯನ್ನು ಈ ಸದನದಲ್ಲಿ ಕೊಟ್ಟಿದ್ದಾರೆ. ಮೊದಲು ಈ ಸದನದಲ್ಲಿ ಈ ಬೇಡಿಕೆಗಳು ಬರುತ್ತವೆ. ಅನಂತರ.....

ಅಧ್ಯಕ್ಷರು.—ಸಾಧ್ಯವಾದ ಮಟ್ಟಿಗೂ ಇಲ್ಲೇ ಮೊದಲು ತೆಗೆದುಕೊಳ್ಳುತ್ತೇವೆಂದು ಹೇಳಿದರು. ಮೇಲ್ಮನೆಯಲ್ಲಿ ಬರೀ ಚರ್ಚೆ ಮಾಡುತ್ತಾರೆ. ಓಟು ಮಾಡುವುದಿಲ್ಲ, ಇದಂಲ್ಲಿ ಪ್ರಿವಿಲೇಜ್ ಬರುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಶ್ರೀಮಾನ್ ಚೆನ್ನಬಸಪ್ಪನವರು ಹೇಳಿಕೆ ಕೊಡತಕ್ಕ ಕಾಲದಲ್ಲಿ ವ್ಯವಸಾಯ ಮತ್ತು ಅರಣ್ಯ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಮಂಡಿಸಿರಲಿಲ್ಲ. ಇಲ್ಲಿ ಯಾವ ಬೇಡಿಕೆಗಳನ್ನು ಇಟ್ಟರೂ ಅದು ಚರ್ಚೆ ಆಗುವವರೆಗೂ ವಿಧಾನಪರಿಷತ್ತಿನಲ್ಲಿ ಚರ್ಚೆ ಆಗುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಭರವಸೆ ಕೊಟ್ಟಿದ್ದಾರೆ. ಭರವಸೆ ಕೊಟ್ಟು ಆದ ಮೇಲೆ.....

ಅಧ್ಯಕ್ಷರು.—ನಾನು ಇಲ್ಲೇ ಇದ್ದೆ ಕೇಳಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಈ ಸಭೆ ಯಾವ ಸಾರ್ವಭೌಮತ್ವದ ಹಕ್ಕನ್ನು ಪಡೆದಿದೆಯೋ ಇಂಥ ಸಭೆಯಲ್ಲಿ ಚರ್ಚೆಯಾಗದ ಬೇಡಿಕೆಗಳನ್ನು, ಅಲ್ಲಿ ಪೂರ್ವಭಾವಿಯಾಗಿ ಚರ್ಚೆ ಮಾಡಿ ಅವಕ್ಕೆ ಉತ್ತರ ಕೊಡತಕ್ಕ ವ್ಯವಸ್ಥೆ ಮಾಡಿದರೆ ಈ ಸದನವಲ್ಲಿ ಬೇಡಿಕೆಗಳನ್ನು ತರುವುದು ಆದರೂ ಏತಕ್ಕೆ ?

ಅಧ್ಯಕ್ಷರು.—ಅವರವರ ನಿಯಮಗಳು ಅವುಗೆ ಇರುತ್ತವೆ. ಅವರ ಹೌಸಿನಲ್ಲಿ ಅವರ ಕಂಟ್ರೋಲ್ ಇದೆ, ನಮ್ಮ ಹೌಸ್‌ಗೆ ಅವರ ಕಂಟ್ರೋಲ್ ಇದೆಯೇ ?

ಶ್ರೀ ಕಾಗೋಡು ತಿಮ್ಮಪ್ಪ.—ತಮ್ಮ ರಕ್ಷಣೆ ಏತಕ್ಕೆ ಬೇಡುತ್ತೇವೆ ! ಯಾವ ರಾಜ್ಯಾಂಗದ ವ್ಯಾಪ್ತಿಯನ್ನು ಈ ಹೌಸಿಗೆ ಕೊಟ್ಟಿದ್ದಾರೆ ?

ಅಧ್ಯಕ್ಷರು.—ಅವರು ಪಾಲಿಸಿ ವಿಷಯ ಚರ್ಚೆ ಮಾಡುತ್ತಾರೆ, ಓಟು ಮಾಡುವುದಿಲ್ಲ. ಅದರಿಂದ ಇದು ಪ್ರಿವಿಲೇಜ್ ಆಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಒಪ್ಪುತ್ತೇನೆ, ಅಲ್ಲಿ ಆಗಿರತಕ್ಕ ಚರ್ಚೆ ನಮ್ಮ ಮೇಲೆ ಪ್ರಭಾವ ಬೀರಬಹುದು ನಾವು ಏನು ತೀರ್ಮಾನ ತೆಗೆದುಕೊಳ್ಳುತ್ತೇವೆ ಆ ತೀರ್ಮಾನಕ್ಕೆ ಅಮ್ಮಿ ಬರ ಬಹುದು, ಪ್ರಭಾವ ಬೀರಬಹುದು. ಆದ್ದರಿಂದ ಅಲ್ಲಿ ಚರ್ಚೆ ಆಗುವುದು ಅನಾವಶ್ಯಕ. ಚೆನ್ನಬಸಪ್ಪನವರು ಕೊಟ್ಟಿರತಕ್ಕ ಭರವಸೆ ಏನು ಇದೆ ? ಅದು ತಮಗೂ ಕೂಡ ಮನಸ್ಸಿಗೆ ಬಂತು. ನಮ್ಮ ಹಕ್ಕುಭಾದ್ಯತ ರಕ್ಷಣೆ ಮಾಡಿಕೊಳ್ಳುವುದಕ್ಕೆ ನಾವು ಏನು ಮಾಡಬೇಕು. ಯಾರ ಮುರೆ ಹೋಗಬೇಕು, ತಾವು ಇಲ್ಲಿ ಭರವಸೆ ಕೊಟ್ಟಮೇಲೆ ಸಂಬಂಧಪಟ್ಟ ಬೇಡಿಕೆಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ ನಾವು ಇಲ್ಲಿ ಕೂತಿದ್ದೇವೆ.

ಶ್ರೀ ಕೆ. ಎಚ್. ಪಾಟೀಲ್.—ಅಗ್ರಿಕಲ್ಚರ್ ಬಗ್ಗೆ ಮಾತ್ರ ಹೇಳುತ್ತೇನೆ. ಒಕ್ಕಲುತನ ಖಾತೆ ವಿಷಯ ಅಲ್ಲಿ ಮಾತನಾಡುವುದು ಬೇಡ ಎಂದು ಹೇಳುವುದಕ್ಕೆ ಈ ಸದನಕ್ಕೆ ಬರುವುದಿಲ್ಲ. ನಾನು ಇನ್ನೂ ರಿಪ್ಲೈ ಕೊಟ್ಟಿಲ್ಲ. ರಿಪ್ಲೈ ಕೊಡಬೇಕೆಂದು ಒತ್ತಾಯ ಮಾಡಿದ್ದರೂ ಕೊಡುತ್ತಾ ಇರಲಿಲ್ಲ. ಈ ಸದನದಲ್ಲಿ ಪೊದಲು ರಿಪ್ಲೈ ಕೊಡುತ್ತೇನೆ ಅನಂತರ ಅಲ್ಲಿ ಕೊಡುತ್ತೇನೆ. ಅಲ್ಲಿ ಮುಂದೆ ಮಾಡುವಂತಹ ವೇಳೆಯಲ್ಲಿ ಅಲ್ಲಿ ಏನಾದರೂ ಅಗ್ರಿಕಲ್ಚರ್ ಮಿನಿಸ್ಟರ್ ತಪ್ಪು ಮಾಡಿದರೆ ಆ ತಪ್ಪನ್ನು ತಿದ್ದಲಿಕ್ಕೆ ತಾವು ಸರ್ವರಿತಿಯಲ್ಲಿ ಸಮರ್ಥರು ಇದ್ದೀರಿ. ಆ ರೀತಿ ಮಾಡಿದರೆ ಸ್ವಾಗತ ಮಾಡುತ್ತೇನೆ. ಅದನ್ನು ಬಿಟ್ಟುಕೊಟ್ಟು ಮಾನ್ಯ ಸದಸ್ಯರು ಏನಾದರೂ ಮಾತ ನಾಡುತ್ತಾ ಇದ್ದರೆ ನಿಮ್ಮನ್ನು ಕಟ್ಟಿ ಹಿಡಿಯುವಕ್ಕೆ ಆಗುತ್ತದೆಯೇ ?

ಶ್ರೀ ಕೋಣಂದೂರು ಲಿಂಗಪ್ಪ.—ಅಲ್ಲಿ ಮುಂದೆ ಮಾತಿದ್ದೇ ತಪ್ಪು ?

ಶ್ರೀ ಕೆ.ಎಚ್. ಪಾಟೀಲ್.-ಅಲ್ಲಿ ಮುಂದೆ ಮಾಡುವುದು ತಪ್ಪು, ಗೊತ್ತಿದೆ ಮುಂದೆ ಮಾಡಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ಸದನಕ್ಕೆ ಆ ಸದನದ ಮೇಲೆ ಸಂಪೂರ್ಣ ಅಧಿಕಾರ ಏದೆ. ನಾವು ನಿರ್ಣಯ ಮಾಡಿದರೆ ಆ ಸದನವನ್ನೇ ರದ್ದು ಮಾಡಲಿಕ್ಕೆ ಸಾಧ್ಯವಿದೆ.

ಅಧ್ಯಕ್ಷರು.—ಅಲ್ಲಿ ನಡೆಯುವ ವ್ಯವಹಾರಗಳ ಬಗ್ಗೆ ನಮಗೆ ಹಕ್ಕು ಇಲ್ಲ ಎಂದು ಹೇಳುವುದು ಆದು ಒಂದೇ ಹಕ್ಕು ಇರುವುದು.

ಶ್ರೀ ಎಸ್, ಬಂಗಾರಪ್ಪ.—ಇಲ್ಲಿ ಆ ಬೇಡಿಕೆಗಳನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕಿಂತ ಮೊದಲು ಆ ಮನೆಗೆ ಕಳುಹಿಸಿಕೊಟ್ಟಿದ್ದಾರೆ. ಇದೇ ವಿಷಯದ ಬಗ್ಗೆ ಕೇಳಿಕೊಂಡಿದ್ದೇನೆ.

ಅಧ್ಯಕ್ಷರು.—ಇದು ಯಾವ ರೀತಿಯಿಂದಲೂ ಪ್ರಿವಿಲೇಜ್ ಮೋಷನ್ ಆಗುವುದಿಲ್ಲ.

Sri S. BANGARAPPA.—Legal aspect and the constitutional matters are to be discussed here. ಆ ಹೌಸಿನ ಮುಂದೆ ಯಾವುದೇ ಪಾಲಿಸಿ ಮ್ಯಾಟರ್ ತರುವುದು ಕೂಡ ರಾಜ್ಯಾಂಗಕ್ಕೆ ವಿರುದ್ಧವಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ತಗ ಉಳಿದಿರುವುದು ನನ್ನ ಇಲಾಖೆಗೆ ಸಂಬಂಧಪಟ್ಟ ವಿಷಯ, ಇಂಡಸ್ಟ್ರೀಸ್‌ಗೆ ಸಂಬಂಧಪಟ್ಟ ಬೇಡಿಕೆಗಳನ್ನು ಚರ್ಚೆ ಮಾಡಿ ಮುಗಿದು ಹೋಗಿದೆ.

BUDGET ESTIMATES FOR 1973-74

Demands for Grants

Demand Nos. 20, 38 and 51

Sri K. H. PATIL (Minister for Agriculture and Forests).—Madam, on the recommendation of the Governor, I beg to move :

"That a sum not exceeding Rs. 14,93,52,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 20 'Agriculture and Horticulture (excluding Fisheries),"